**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 31/2024**

ಸಿಡಬ್ಲ್ಯೂ-3/ಪಿಡಬ್ಲ್ಯೂ-2

| | |
|---|---|
| ಸಾಕ್ಷಿದಾರರ ಹೆಸರು | ಚಂದ್ರಪ್ಪ ಕೂಡಲ |
| ತಂದೆ ಹೆಸರು | ಶಿದ್ದಪ್ಪ |
| ವಯಸ್ಸು | 76 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಾಲ್ವೇಕಲ್ಲಾಪುರ ಗ್ರಾಮ |

**ದಿನಾಂಕ :25-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-1 ಮತ್ತು 2 ರವರ ಪರಿಚಯ ಇದ್ದು, ಅವರು ನನ್ನ ಗ್ರಾಮದವರು ಇರುತ್ತಾರೆ. ಸಾಕ್ಷಿಯು ಒಂದು ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸಹಿಯನ್ನು ಗುರುತಿಸಿದ ದಾಖಲೆಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಘಟನಾ ಸ್ಥಳವಾದ ಚಾಸಾ-4 ರವರಿಗೆ ಸೇರಿದ ಹಿತ್ತಲ ಜಾಗದಲ್ಲಿ ಮಾಡಿರುತ್ತೇನೆ. ಘಟನಾ ಸ್ಥಳವನ್ನು ಚಾಸಾ-1 ರವರು ತೋರಿಸಿದ್ದು, ಸದರಿ ದಾಖಲೆ ಬರೆಯುವಾಗ ಚಾಸಾ-2 ರವರು ಸಹ ಹಾಜರಿದ್ದರು. ಸದರಿ ದಾಖಲೆಯನ್ನು ದಿಃ 12-03-2023 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 12.00 ರ ಅವಧಿಯಲ್ಲಿ ಬರೆದಿರುತ್ತಾರೆ. ಅದರಲ್ಲಿ ಇರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಘಟನಾ ಸ್ಥಳದಲ್ಲಿ ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಫೋಟೋವನ್ನು ತೆಗೆದು ಮತ್ತು ಒಂದು ಕಲ್ಲನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಒಂದು ಛಾಯಾ ಚಿತ್ರ

ನೋಡುತ್ತಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಸದರಿ ಕಲ್ಲಿಗೆ ಸುತ್ತಿರುವ ಬಿಳಿಯ ಮಾದರಿ ಚೀಟಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಮು.ಮಾ-1(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಎಂ ವಕೀಲರಿಂದಃ**

1. ಇಂದು ನ್ಯಾಯಾಲಯಕ್ಕೆ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ. ನಾನು ಪಂಚನಾಮೆಗೆ ಸಹಿಯನ್ನು ಘಟನಾ ಸ್ಥಳದಲ್ಲಿಯೇ ಮಾಡಿರುತ್ತೇನೆ. ಘಟನಾ ಸಮಯದಲ್ಲಿ ನಾನು ಜಮೀನಿನಿಂದ ಸೊಪ್ಪನ್ನು ತೆಗೆದುಕೊಂಡು ಬರುತ್ತಿದ್ದಾಗ ಜಗಳ ಆಗಿರುವುದನ್ನು ನೋಡಿದ ಆಧಾರದ ಮೇಲೆ ಘಟನಾ ಸ್ಥಳ ಎಂದು ಹೇಳುತ್ತಿದ್ದೇನೆ. ನಾನು ಜಗಳದ ಸಮಯದಲ್ಲಿ ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ರೀತಿಯ ಕಲ್ಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮು.ಮಾ-1 ರೀತಿಯ ಕಲ್ಲು ಜಪ್ತುಪಡಿಸಿಕೊಂಡ ಕಲ್ಲು ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಯ ಸಮಯಕ್ಕೆ ಹಾಜರು ಇರುವುದಿಲ್ಲ ಮತ್ತು ಘಟನಾ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ

ಪಿ.ಡಬ್ಲ್ಯೂಃ 1

ದಿನಾಂಕ 25-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಎಂ ವಕೀಲರಿಂದಃ**

1. ಘಟನೆಯು ದಿಃ 12-03-2023 ರಂದು ಸಂಜೆ 6.30 ಗಂಟೆಗೆ ಜರುಗಿತ್ತು. ನನಗೆ ಬಂದ ಪಿತ್ರಾರ್ಜಿತ ಆಸ್ತಿಯಲ್ಲಿ ಸೊಪ್ಪನ್ನು ಹಾಕಲು ಹೋದಾಗ ಆರೋಪಿಗಳು ಚಾಸಾ-4 ರವರಿಗೆ ಹೊಡೆದಿರುತ್ತಾರೆ. ಸೊಪ್ಪನ್ನು ಘಟನೆಯ ದಿನ ಮತ್ತು ಸಮಯದಲ್ಲಿ ಚಕ್ಕಡಿಯಲ್ಲಿ ಚಾಸಾ-4 ರವರು ತಂದಿದ್ದರು. ಚಾಸಾ-4 ರವರಿಗೆ 1 ನೇ ಆರೋಪಿ ಹೊಡೆದಿರುತ್ತಾಳೆ. 1 ನೇ ಆರೋಪಿಗೆ 63 ವರ್ಷ ವಯಸ್ಸಾಗಿದ್ದು ಮತ್ತು ಕಣ್ಣು ಸರಿಯಾಗಿ ಕಾಣದೇ ಇರುವುದರಿಂದ ನಾನು ಹೇಳುವಂತೆ ಹೊಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಮತ್ತು ಸಮಯದಲ್ಲಿ 2 ಮತ್ತು 3 ನೇ ಆರೋಪಿಗಳು ಸಹ ಇದ್ದರು. 2 ಮತ್ತು 3 ನೇ ಆರೋಪಿಗಳು ಘಟನೆಯ ದಿನ ಮತ್ತು ಸಮಯದಲ್ಲಿ ಬೆಂಗಳೂರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಘಟನೆಯು ನಾನು ಹೇಳುವ ದಿನಾಂಕದಂದು ನಡೆದಿಲ್ಲ, ಆದರೆ ದಿಃ08-03-2023 ರಂದು ಆಗಿತ್ತು ಎಂದರೆ ಸರಿ.

2. ಘಟನೆಯಲ್ಲಿ 1 ನೇ ಆರೋಪಿಯು ಚಾಸಾ-4 ರವರಿಗೆ ಹಲ್ಲೇ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದನ್ನು ದಾಖಲಿಸುವ ಮೊದಲೇ ಘಟನೆಗೆ ಸಂಬಂಧಿಸಿದಂತೆ ಆರೋಪಿಗಳು ಪಿರ್ಯಾದನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ನಾನೇ ಮೊದಲು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗಳು ನೀಡಿದ ಪಿರ್ಯಾದಿಗೆ ಸಂಬಂಧಿಸಿದಂತೆ ಪೊಲೀಸರು ಸರಿಯಾಗಿ ತನಿಖೆ ಮಾಡದೇ ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ.

- 6 -

3. ನಾನು ನೀಡಿದ ಪಿರ್ಯಾದನ್ನು ಚಾಸಾ-2 ರವರು ಬರೆದಿರುತ್ತಾರೆ. ಪಿರ್ಯಾದಿಯಲ್ಲಿ ಇರುವ ಸಂಗತಿಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ಚಾಸಾ-2 ರವರು ನಮ್ಮ ಗ್ರಾಮದವರು ಇದ್ದು,

ನನಗೆ ಸಂಬಂಧಿ ಇರುವುದಿಲ್ಲ. ಘಟನೆಯು ನಮ್ಮ ಮನೆಯ ಹಿತ್ತಲಿನಲ್ಲಿ ಆಗಿರುತ್ತದೆ. ಘಟನಾ ಸ್ಥಳದ ಪೂ– ಲೋಹಿತರೆಡ್ಡಿ ಮರೋಡಿ ರವರ ಹಿತ್ತಲು, ಪ– ರಸ್ತೆ, ಉ– ನನಗೆ ಸೇರಿದ ಮನೆ ಮತ್ತು ದ– ನಿಂಗವ್ವ ಮರೋಡಿ ರವರ ಮನೆ ಇದೆ. ಚಾಸಾ–4 ರವರ ಮೊಣಕಾಲಿಗೆ ಒಳಪೆಟ್ಟು ಆಗಿತ್ತು. ಆತನಿಗೆ 1 ನೇ ಆರೋಪಿಯು ಕಲ್ಲಿನಿಂದ ಹೊಡೆದಿದ್ದಳು. ಕಲ್ಲಿನಿಂದ ಹೊಡೆದಲ್ಲಿ ಒಳಪೆಟ್ಟು ಆಗುವುದಿಲ್ಲ ಬದಲಾಗಿ ತೀವ್ರ ತರದ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ಕಲ್ಲಿನಿಂದ ಹಲ್ಲೇ ಮಾಡಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಮ್ಮ ಮತ್ತು ಆರೋಪಿಗಳ ನಡುವೆ ಆಸ್ತಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ಸರಿ. 1 ನೇ ಆರೋಪಿಗೆ ಇಬ್ಬರು ಹೆಣ್ಣು ಮಕ್ಕಳು. 1 ನೇ ಆರೋಪಿಯ ಅಣ್ಣನ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪಿರ್ಯಾದನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತದ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ